ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಭಾಗ್ಯವಂತ ಭಾರತೀಯ ನಾರಿಯರು

# ರಾಜನರ್ತಕಿ ಮೈನಾಬಾಯಿ

ಭಾಗ ೨

ಡಾ. ಶೈಲಜಾ ಆಮೂರ



ಈಗ ಮೈನಾಬಾಯಿಯ ಮನದಲ್ಲಿ ಯಾವುದೇ ದ್ವಂದ್ವ ಅಥವಾ ದುಗುಡವಿಲ್ಲ. ಅವಳು ರಾಜಾ ಅಜಿತ್‌ಸಿಂಗನ ಬಳಿ ಬಂದು ''ನಾನು ತೀರ್ಥಯಾತ್ರೆಗೆ ಹೊರಡಬೇಕೆಂದು ನಿರ್ಧರಿಸಿದ್ದೇನೆ. ದಯವಿಟ್ಟು ನನಗೆ ಅಪ್ಪಣೆ ಕೊಡಿ'' ಎಂದು ಕೇಳಿಕೊಂಡಳು. ಅಜಿತ್‌ಸಿಂಗ್ ತನ್ನ ಒಪ್ಪಿಗೆ ಸೂಚಿಸಿದ್ದು ಮಾತ್ರವಲ್ಲದೆ ಖರ್ಚಿಗಾಗಿ ಹಣವನ್ನು ನೀಡಿದನು. ಮೈನಾಬಾಯಿ ಹಾಗೂ ಭಾಮರಿಬಾಯಿ ತೀರ್ಥಯಾತ್ರೆಗೆ ಹೊರಡಲನುವಾದರು. ಗಯಾ, ಕಾಶಿ, ಮಥುರಾ ಹಾಗೂ ಬೃಂದಾವನಗಳಿಗೆ ಭೇಟಿಕೊಟ್ಟು ಕೊನೆಗೆ ನೈನಿತಾಲ್‌ಗೆ ಬಂದು ತಲುಪಿದರು. ಅಲ್ಲಿ ಒಂದು ಮಂದಿರದಲ್ಲಿ ಹೋದಾಗ ಸ್ವಾಮಿ ವಿವೇಕಾನಂದರು ನೈನಿತಾಲ್‌ಗೆ ಬರುವವರಿದ್ದಾರೆ ಎಂಬ ವದಂತಿ ಇವರಿಗೆ ತಿಳಿಯಿತು. ಹೇಗಾದರೂ ಮಾಡಿ ಸ್ವಾಮೀಜಿಯವರ ದರ್ಶನ ಪಡೆಯಲೇಬೇಕಂದು ನಿರ್ಧರಿಸಿ ನೈನಿತಾಲ್‌ನಲ್ಲಿಯೇ ಉಳಿದುಕೊಂಡರು. ಮುಂದೆ ನಡೆದ ಘಟನೆಗಳ ಬಗ್ಗೆ ಭಗಿನಿ ನಿವೇದಿತಾ ಬರೆದ ಲೇಖನಗಳಿಂದ ಹೆಚ್ಚು ಸ್ಪಷ್ಟವಾಗಿ ವಿಷಯಗಳನ್ನು ಗ್ರಹಿಸಬಹುದಾಗಿದೆ. ನಿವೇದಿತಾಳ ಟಿಪ್ಪಣಿ ಈ ಪ್ರಕಾರವಾಗಿದೆ :

''ನಮ್ಮ ನೈನಿತಾಲ್ ಪ್ರವಾಸ ಮುಖ್ಯವಾದ ಮೂರು ಘಟನೆಗಳಿಂದ ಆನಂದಮಯವಾಗಿ ಕಳೆಯಿತು. ಮೊದಲನೆಯದು ಸ್ವಾಮಿ ವಿವೇಕಾನಂದರ ಮೂಲಕ ಖೇತ್ರಿಯ ನರೇಶ ರಾಜಾ ಅಜಿತ್‌ಸಿಂಗನನ್ನು ಭೇಟಿಮಾಡಿದ್ದು, ಎರಡನೆಯ ಘಟನೆ, ಇಬ್ಬರು ನರ್ತಕಿಯರು ಸ್ವಾಮೀಜಿಯವರು ಎಲ್ಲಿ ವಾಸಿಸುತ್ತಿದ್ದಾರೆ, ನಾವು ಅವರ ದರ್ಶನ ಪಡೆಯುವುದಕ್ಕಾಗಿಯೇ ಬಂದಿದ್ದೇವೆ ಎಂದು ನಮಗೆ ವಿನಂತಿ ಮಾಡಿಕೊಂಡರು. ಆಗ ಅಲ್ಲಿದ್ದ ಇತರ ಜನ ಇಂಥ ನರ್ತಕಿಯರು, ಕೀಳು ಜೀವನ ನಡೆಸುವ ಹೆಣ್ಣುಮಕ್ಕಳು ಸ್ವಾಮೀಜಿಯವರನ್ನು ಭೇಟಿ ಮಾಡುವುದರ ಬಗ್ಗೆ ಆಕ್ಷೇಪ ಎತ್ತಿದ್ದರು. ಸ್ವಾಮೀಜಿ ಇದಕ್ಕೆ ಕಿವಿಗೊಡದೆ ಎಲ್ಲರ ವಿರೋಧವನ್ನೂ ವಿರೋಧಿಸಿ ನರ್ತಕಿಯರನ್ನು ಸಹೃದಯದಿಂದ ಸ್ವಾಗತಿಸಿದರು. ನಂತರ ಸ್ವಾಮೀಜಿಯವರ ಮುಖದಿಂದಲೇ ನಮಗೆ ತಿಳಿಯಿತು, ಅವರು ಖೇತ್ರಿ ರಾಜ್ಯಸಭೆಯ ನರ್ತಕಿಯರೆಂದು. ಮೊದಲ ಭೇಟಿಯಲ್ಲಿ ಸ್ವಾಮೀಜಿ ಅವರ ಗಾನವನ್ನು ಕೇಳಲು ನಿರಾಕರಿಸಿದ್ದು, ತರುವಾಯ ಅವಳು ಸೂರದಾಸರ ಭಜನೆ ಹಾಡಿದ್ದು ಹಾಗೂ ಸ್ವಾಮೀಜಿಯವರಿಗೆ 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ತತ್ತ್ವ ಸಂಪೂರ್ಣವಾಗಿ ಮನವರಿಕೆಯಾಗಿದ್ದು ಈ ಎಲ್ಲವನ್ನೂ ತಿಳಿದುಕೊಳ್ಳುವ ಅವಕಾಶ ನಮಗೆ ಲಭಿಸಿತು. ಸ್ವಾಮೀಜಿಯವರೇ ಸ್ವತಃ ಹೇಳಿದರು, '' 'ಪ್ರಭು ಮೇರೆ ಅವಗುಣ ಚಿತ್ ನ ಧರೋ' ಎಂಬ ಆ ಮೊದಲಿನ ಸಾಲು ಕೇಳುತ್ತಿದ್ದಂತೆಯೇ ನನ್ನ ಕಣ್ಣಿಗೆ ಕವಿದಿದ್ದ ಮುಸುಕು ಸರಿಯಿತು. ನಿಜಕ್ಕೂ ಎಲ್ಲರಲ್ಲೂ ವಾಸವಾಗಿರುವ ಚೇತನ ಅದೇ ಒಂದು ಶಕ್ತಿ . ನಾನು ಯಾರನ್ನೂ ಇನ್ನು ಮೇಲೆ ನಿಂದಿಸಲಾಗದು.''

''ನಂತರ ಸ್ವಾಮೀಜಿ ನರ್ತಕಿಯರನ್ನು ಆಶೀರ್ವದಿಸಿ, ಅವರಿಗೆ ಕೆಲವು ಹಿತವಚನ ನೀಡಿ ಅವರನ್ನು ಆತ್ಮೀಯತೆಯಿಂದ ನಡೆಸಿ ಕೊಂಡ ರೀತಿ ಕಂಡು ಎಲ್ಲ ನೆರೆದಿದ್ದವರ ಹೃದಯ ತುಂಬಿ ಬಂದು ಕಣ್ಣುಗಳು ತೇವವಾದವು.''

ತೀರ್ಥಯಾತ್ರೆ ಪೂರೈಸಿದ ಮೈನಾಬಾಯಿ ಹಾಗೂ ಭಾಮರೀ ಬಾಯಿ ಖೇತ್ರಿಗೆ ಮರಳಿ ಬಂದು ಮತ್ತೆ ತಮ್ಮ ನಿತ್ಯದ ಕಾರ್ಯ ಕಲಾಪಗಳಲ್ಲಿ ನಿರತರಾದರು. ವಿಧಿಯ ಆಟ ಅವರ ಬದುಕಿನಲ್ಲಿ ತನ್ನ ಕುಚೇಷ್ಟೆ ಪ್ರಾರಂಭಿಸಿತು. ೧೯೦೧ನೆಯ ಇಸವಿಯಲ್ಲಿ ಅವರ ಪೋಷಕ ರಾಜ ಅಜಿತ್‌ಸಿಂಗ್ ತೀರಿಹೋದನು. ಒಂದೇ ವರ್ಷದ ಅವಧಿಯಲ್ಲಿ ೧೯೦೨ನೆಯ ಇಸವಿಯಲ್ಲಿ ಅವರ ಪರಮಪೂಜ್ಯ ಗುರುವಾಗಿದ್ದ ಸ್ವಾಮಿ ವಿವೇಕಾನಂದರ ಮಹಾ ಸಮಾಧಿಯ ಸುದ್ದಿ ಕೇಳಿ ಬಂತು. ತೀವ್ರವಾದ ಹತಾಶೆಗೊಳ ಗಾದ ಮೈನಾಬಾಯಿ ಖೇತ್ರಿಯನ್ನೇ ಬಿಟ್ಟು ಬೇರೆ ಕಡೆಗೆ ಹೋಗಲು ನಿರ್ಧರಿಸಿದಳು. ಕೆಲವು ದಿನಗಳ ನಂತರ ಬೃಂದಾ ವನದಲ್ಲಿ ಭಿಕ್ಷೆ ಬೇಡುತ್ತ ಅಲೆದಾಡುತ್ತಿದ್ದಾಗ ಹಲವು ಜನ ಅವಳನ್ನು ಗುರುತಿಸಿದರು. ಅವಳು ಭಜನೆ ಹಾಡಿ ಭಿಕ್ಷೆ ಎತ್ತು ತ್ತಿದ್ದಾಗ ದೊರೆಯುತ್ತಿದ್ದ ಹಣವನ್ನು ವಿನಿಯೋಗಿಸಿ ಕೆಲವು ಅನಾಥರಿಗೆ ಆಶ್ರಯ ನೀಡುತ್ತಿದ್ದಳು. ಈ ಅನಾಥ ಜನ ಅವ ಳನ್ನು 'ದೇವಿ ಮಾ' ಎಂದು ಸಂಬೋಧಿಸುತ್ತಿದ್ದರು. ಅವರ ಸಂಖ್ಯೆ ಹೆಚ್ಚಾಗತೊಡಗಲು ಮೈನಾಬಾಯಿ ಖೇತ್ರಿಯಿಂದ ಭಾಮರೀಬಾಯಿಯನ್ನು ಕರೆಸಿಕೊಂಡಳು. ಅನಾಥಾಶ್ರಮ ನಡೆ ಸುವುದಕ್ಕಾಗಿ ಇವರಿಬ್ಬರೂ ತೀವ್ರವಾಗಿ ಶ್ರಮಿಸಲಾರಂಭಿಸಿದರು. ವಯಸ್ಸು ಏರುತ್ತಿದ್ದಂತೆ ಮೈನಾಬಾಯಿಯ ಆರೋಗ್ಯದಲ್ಲಿ ಏರುಪೇರು ಉಂಟಾಗಲಾರಂಭಿಸಿತು. ಭಾಮರೀಬಾಯಿ ಮತ್ತೆ ಅವಳನ್ನು ಖೇತ್ರಿಗೆ ಕರೆತಂದಳು. ಸ್ವಾಮೀಜಿಯವರ ಭೇಟಿ ಯನ್ನು ಸ್ಮರಿಸಿಕೊಳ್ಳುತ್ತ ಭಾವಾವಿಷ್ಟಳಾಗುತ್ತಿದ್ದ ಮೈನಾಬಾಯಿ ಯನ್ನು ಕಾಣಲು ಊರಿನ ಎಷ್ಟೋ ಜನ ಬರುತ್ತಿದ್ದರು. ಅವ ರೊಡನೆ ನಡೆಯುತ್ತಿದ್ದ ಅವಳ ಸಂಭಾಷಣೆಗಳಿಂದ ಹಾಗೂ ಖೇತ್ರಿಯ ಹಿರಿಯ ನಾಗರಿಕರಿಂದ ಸ್ವಾಮೀಜಿಯವರ ಕುರಿ ತಾಗಿ ಎಷ್ಟೋ ಸಂಗತಿಗಳು ಬೆಳಕಿಗೆ ಬಂದಿವೆ.

ಖೇತ್ರಿಯ ರಾಜಪುರೋಹಿತರಾಗಿದ್ದ ರಾಮಸ್ವರೂಪ ಪಾರಿಖ ಎನ್ನುವ ಒಬ್ಬ ಗಣ್ಯವ್ಯಕ್ತಿ ಮೈನಾಬಾಯಿಯ ಬಗ್ಗೆ ಮಾತ ನಾಡುತ್ತ, ''ಮೈನಾಬಾಯಿ ತುಂಬ ಉತ್ತಮ ಮಟ್ಟದ ಹಾಡು ಗಾರ್ತಿ. ಸದಾ ಮುಗುಳುನಗೆಯೊಂದಿಗೆ ಎಲ್ಲರೊಡನೆಯೂ ಅತ್ಯಂತ ಮೃದುವಾಗಿ, ಮಧುರವಾಗಿ ಮಾತನಾಡುತ್ತಿದ್ದಳು. ಅವಳ ಈ ಎಲ್ಲ ಸುಗುಣಗಳಿಂದ ಹಾಗೂ ಘನತೆಯ ನಡ ವಳಿಕೆಗಳಿಂದ ಸಂತುಷ್ಟನಾಗಿದ್ದ ರಾಜ ಅವಳನ್ನು ಯಾವಾಗಲೂ ಹೊಗಳುತ್ತಿದ್ದರು'' ಎಂದು ಅವಳನ್ನು ಸ್ತುತಿಸಿದ್ದಾರೆ.

ಮೈನಾಬಾಯಿ ಹಾಡುತ್ತಿದ್ದ ಕೆಲವು ಭಜನೆಗಳನ್ನು ಸ್ವಾಮಿ ವಿವೇಕಾನಂದರು ತಮ್ಮ ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದರು. ಎಷ್ಟೋ ಸಾರಿ ತಮ್ಮ ಪರಿವ್ರಾಜಕ ಜೀವನದ ದಿನಗಳಲ್ಲಿ ಈ ಭಜನೆಗಳನ್ನು ಹಾಡುತ್ತಿದ್ದರು. ಸ್ವಾಮೀಜಿಯವರಿಗೆ ಸೂರ ದಾಸರ ಭಜನೆಗಳು ತುಂಬ ಪ್ರಿಯವಾಗಿದ್ದವು. ಮೈನಾಬಾಯಿ ಮೇಲಿಂದ ಮೇಲೆ ಹಾಡುತ್ತಿದ್ದ ಮತ್ತೊಂದು ಸೂರದಾಸರ ಭಜನೆ :

ದಯಾನಿಧೇ, ತೋರಿ ಗತಿ ಲಖಿನ ಪರೇ
ಧರ್ಮ ಅಧರ್ಮ, ಅಧರ್ಮ ಧರ್ಮ ಕರಿ
ಅಕಾರಣ ಕರಣ ಕರೇ....ದಯಾನಿಧಿ.......

ಈ ಭಜನೆಯನ್ನು ಸ್ವಾಮೀಜಿ ಜುನಾಗಢದಲ್ಲಿ ಹಾಡಿದಾಗ ಅಲ್ಲಿಯ ಸುಪ್ರಸಿದ್ಧ ವೈದ್ಯರಾಗಿದ್ದ ಝುಂಡು ಭಟ್ಟರು (Jhandhu Bhat) ಭಾವಾವಿಷ್ಟರಾಗಿ ಕಂಬನಿ ಸುರಿಸಲಾರಂಭಿಸಿದರು ಎಂದು ಅಲ್ಲಿಯ ಪ್ರತ್ಯಕ್ಷದರ್ಶಿಗಳಾಗಿದ್ದ ಸ್ವಾಮಿ ಅಖಂಡಾ ನಂದರು ಉಲ್ಲೇಖಿಸಿದ್ದಾರೆ.

ಸ್ವಾಮಿ ವಿವೇಕಾನಂದರು ತಮ್ಮ ಭಾರತಭ್ರಮಣ ವೇಳೆ ಯಲ್ಲಿ ತಮ್ಮೊಂದಿಗೆ ಒಂದು ನೋಟ್‌ಬುಕ್ ತೆಗೆದುಕೊಂಡು ಅದರಲ್ಲಿ ಸಮಾರು ೧೮೮೬ನೆಯ ಇಸವಿಯಿಂದ ಅನೇಕ ಭಜನೆ ಗಳನ್ನು, ಅವುಗಳ ಸ್ವರಚಲನೆಗಳನ್ನು ಹಾಗೂ ಅದಕ್ಕೆ ಉಪ ಯೋಗವಾಗುವ ಮೃದಂಗದ ತಾಳವನ್ನು ತಮ್ಮ ಹಸ್ತಾಕ್ಷರ ದಲ್ಲಿಯೇ ಬರೆದಿಟ್ಟುಕೊಂಡಿದ್ದರು. ಅವರು ಮದ್ರಾಸಿನಲ್ಲಿ ಮನ್ಮಥ ನಾಥ ಭಟ್ಟಾಚಾರ್ಯರ ಮನೆಯಲ್ಲಿ ವಾಸಿಸುತ್ತಿದ್ದಾಗ ಅವನ ಒಂಬತ್ತು ವರ್ಷದ ಪುಟ್ಟಮಗಳಿಗೆ ಸಂಗೀತ ಕಲಿಸುವುದಕ್ಕಾಗಿ ನೋಟ್‌ಬುಕ್ಕನ್ನು ಅವಳ ಕೈಗೆ ಕೊಟ್ಟಿದ್ದರು. ಅವರು ಮುನ್ಷಿ ಜಗಮೋಹನಲಾಲರೊಂದಿಗೆ ಮದ್ರಾಸಿನಿಂದ ಎರಡನೆಯ ಸಾರಿ ಖೇತ್ರಿಗೆ ಹೊರಟಾಗ ಆ ನೋಟ್‌ಬುಕ್ ಮನ್ಮಥನಾಥ ಭಟ್ಟಾ ಚಾರ್ಯರ ಮಗಳ ಬಳಿಯೇ ಉಳಿಯಿತು. ಅದರಲ್ಲಿ ಸ್ವಾಮೀಜಿ ಯವರು ಮೈನಾಬಾಯಿ ಹಾಡುತ್ತಿದ್ದ ಸೂರದಾಸರ ಎರಡು ಭಜನೆಗಳನ್ನು ('ಪ್ರಭು ಮೇರೇ ಅವಗುಣ ಚಿತ ನ ಧರೋ' ಮತ್ತು 'ದಯಾನಿಧೇ, ತೋರಿ ಗತಿ ಲಖಿನ ಪರೇ') ಬರೆದದ್ದು ಇಂದಿಗೂ ಲಭ್ಯವಿದೆ.

ತನ್ನ ತಾರುಣ್ಯಾವಸ್ಥೆಯಲ್ಲಿ ಮೈನಾಬಾಯಿ ಹಾಗೂ ಅವಳ ಸಂಗಡಿಗರು ಹಾಡುತ್ತಿದ್ದ ಭಜನೆಗಳನ್ನು ಕೇಳಿದ್ದ ಗುಮಾಂಗ್ ಸಿಂಗ್ ಎನ್ನುವವನು ವೃದ್ಧೆಯಾಗಿದ್ದ ಭಾಮರೀಬಾಯಿಯನ್ನು ಭೇಟಿ ಮಾಡಿ, ಖೇತ್ರಿ ರಾಜನ ದರ್ಬಾರ್‌ನಲ್ಲಿ ನಡೆಯುತ್ತಿದ್ದ ಘಟನೆಗಳ ಬಗ್ಗೆ ಟಿಪ್ಪಣಿ ಬರೆದಿಟ್ಟುಕೊಂಡಿದ್ದನು. ಆ ಉಲ್ಲೇಖದ ಪ್ರಕಾರ ಭಾಮರೀಬಾಯಿ, ಜಾನಕಿಬಾಯಿ ಹಾಗೂ ಮತ್ತೆ ಕೆಲವು ಬೇರೆ ಹುಡುಗಿಯರಿಗೆ ಮೈನಾಬಾಯಿ ಸಂಗೀತ ಕಲಿಸು ತ್ತಿದ್ದಳು. ಮೈನಾಬಾಯಿಯಿಂದ ಕಲಿತಿದ್ದ ಎರಡು ಭಜನೆಗಳನ್ನು ಭಾಮರೀಬಾಯಿ ಹಾಡಿದಳು. ಆ ಭಜನೆಗಳು–

೧) ಅಲಟ ಸುಖ, ಪಲಟ ಸುಖ, ನಿತ್ಯ ಸ್ಮರಣ
ನಾಮ ಗೋವಿಂದಜೀ ಕಾ ಸದಾ ಲೀಜೇ....

ಹಾಗೂ

೨) ತೂಹಿ ಬ್ರಹ್ಮ ತುಹೀ ವಿಷ್ಣು, ತುಹೀ ಶೇಷ, ತುಹಿ ಮಹೇಶ
ತುಹಿ ಆದಾ, ತುಹಿ ನಾದ, ತುಹಿ ಅನಾದ ತುಹಿ ಗಣೇಶ..

ಖೇತ್ರಿಯ ಹಿರಿಯ ನಾಗರಿಕರನ್ನು ಸಂದರ್ಶಿಸಿದಾಗ ಅವರಿಂದ ದೊರೆತ ಹಲವು ಅಂಶಗಳು ಹಿಂದೀ ಲೇಖನಗಳಲ್ಲಿ ಪ್ರಕಟವಾಗಿದ್ದವು. ಅದರ ಒಂದು ಹೇಳಿಕೆಯಂತೆ ಮೊದಲನೆಯ ಬಾರಿ ಮೈನಾಬಾಯಿಯನ್ನು ಸ್ವಾಮಿ ವಿವೇಕಾನಂದರು ಭೇಟಿ ಮಾಡಿದಾಗ ಅವಳ ವಯಸ್ಸು ಇಪ್ಪತ್ತೊಂದು ಇತ್ತು . ಸ್ವಾಮೀಜಿಯವರನ್ನು ಕಂಡು ಅವರ ದಿವ್ಯ ಪ್ರಭಾವಲಯದಿಂದ ಅವಳ ಉಳಿದ ಜೀವನವೆಲ್ಲ ಸಂಪೂರ್ಣವಾಗಿ ಮಾರ್ಪಾಡಾಗಿತ್ತು. ಅವಳ ದುಃಖಮಯ ಜೀವನಕ್ಕೆ ಒಂದು ಅಂತ್ಯ ದೊರೆತಿತ್ತು.


ರಾಜನರ್ತಕಿಯರೆಲ್ಲ 'ಕನೂರಿಯ ಸವೇಲಿ' ಎನ್ನುವ ಒಂದು ಮನೆಯಲ್ಲಿ ವಾಸಿಸುತ್ತಿದ್ದರು. ಮಹಾರಾಜ ಅಜಿತ್‌ಸಿಂಗ ಅವರಿಗೆಲ್ಲ ಉಳಿದುಕೊಳ್ಳಲು ಎಲ್ಲ ವ್ಯವಸ್ಥೆ ಮಾಡಿಕೊಟ್ಟಿದ್ದನು. ಈಗ ಈ ಮನೆ ಪ್ರತಾಪ್ ಮೆಮೋರಿಯಲ್ ಸ್ಕೂಲ್ ಆಗಿ ಮಾರ್ಪಾಡಾಗಿದೆ. ಸ್ವಾಮಿ ವಿವೇಕಾನಂದರ ದಿವ್ಯ ಸಾನ್ನಿಧ್ಯದಿಂದ ಪಾವನವಾಗಿರುವ ಈ ಸ್ಥಳದಲ್ಲಿ ಮೈನಾಬಾಯಿ ಸ್ವಾಮೀಜಿಯವರೊಂದಿಗೆ ತಾನು ಕಳೆದಿದ್ದ ಕ್ಷಣಗಳನ್ನು ನೆನೆಯುತ್ತ ಮೈಮರೆಯುತ್ತಿದ್ದಳು.

ಅವಳು ತನ್ನ ಜೀವನದ ಕೊನೆಯ ದಿನಗಳಲ್ಲಿ ಉಸುರುತ್ತಿದ್ದ ನುಡಿಗಳು – 'ನನಗೆ ಯಾವ ಭಯವೂ ಇಲ್ಲ. ನನಗಾವ ಆಸೆಯೂ ಇಲ್ಲ. ನನಗೇಕೆ ದುಃಖವಾಗುತ್ತದೆ? ಸ್ವಾಮೀಜಿಯೇ ನನ್ನ ನಂದಲಾಲನು. ನಂದಲಾಲನ ಮಾತೆಗೆ ದುಃಖ ಎಂತಹದು?'

'ನಂದಲಾಲಾ, ನನ್ನ ನಂದಲಾಲಾ' ಎನ್ನುತ್ತ ೧೯೬೨ನೆ ಇಸವಿಯಲ್ಲಿ ಮೈನಾಬಾಯಿ ಇಹಲೋಕಯಾತ್ರೆ ಮುಗಿಸಿದಳು. ಅವಳ ವಯಸ್ಸು ಆಗ ತೊಂಬತ್ತೆರಡು.

*(ಸಮಾಪ್ತಿ)*

**ಯುವಚೇತನ**



## ನಿರಪೇಕ್ಷ ಬ್ರಹ್ಮನೆಂಬ ಸೂರ್ಯ

ನಿರಪೇಕ್ಷ ದೃಷ್ಟಿಯಿಂದ ಬ್ರಹ್ಮನೊಬ್ಬನೇ ಸತ್ಯ. ಸಾಪೇಕ್ಷ ದೃಷ್ಟಿಯಿಂದ ಭರತ ಖಂಡದಲ್ಲಿ ಮತ್ತು ಇತರ ಕಡೆಗಳಲ್ಲಿ ಒಂದೇ ಬ್ರಹ್ಮನ ಭಿನ್ನ ಭಿನ್ನ ಭಾವನೆಗಳ ಮೇಲೆ ನಿಂತ ಪಂಥಗಳೆಲ್ಲ ಸತ್ಯ. ಕೆಲವು ಇತರ ಕೆಲವಕ್ಕಿಂತ ಮೇಲು ಅಷ್ಟೆ. ಒಬ್ಬ ಸೂರ್ಯನ ಕಡೆ ನೇರವಾಗಿ ಹೋಗುತ್ತಾನೆ ಎಂದು ಭಾವಿಸಿ, ಅವನು ಸೂರ್ಯನ ಸಮಾಪಕ್ಕೆ ಹೋದಂತೆಲ್ಲ ಸೂರ್ಯನ ಹೊಸ ಹೊಸದಾದ ದೃಶ್ಯಗಳನ್ನು ನೋಡುವನು. ಅವನು ಕೊನೆಗೆ ನಿಜವಾದ ಸೂರ್ಯನನ್ನು ಸೇರುವ ವರೆಗೆ ಸೂರ್ಯನ ಗಾತ್ರ, ದೃಶ್ಯ, ಬೆಳಕು ಪ್ರತಿ ನಿಮಿಷವೂ ಹೊಸಹೊಸದಾಗಿ ಕಾಣುವುವು. ಮೊದಲು ಅವನಿಗೆ ಸೂರ್ಯ ಒಂದು ದೊಡ್ಡ ಚೆಂಡಿನಷ್ಟು ದೊಡ್ಡವನಾಗಿ ಕಂಡುಬಂದ. ಆಮೇಲೆ ಸೂರ್ಯನು ಹೆಚ್ಚೆಚ್ಚು ದೊಡ್ಡವನಾಗಿ ಕಂಡುಬಂದ, ಸೂರ್ಯ ಎಂದೂ ದೊಡ್ಡ ಚೆಂಡಿನಂತೆಯೂ ಇರಲಿಲ್ಲ, ತನ್ನ ಪ್ರಯಾಣದಲ್ಲಿ ಕಂಡ ಹಲವು ಸೂರ್ಯರಂತೆಯೂ ಇಲ್ಲ. ಆದರೂ ನಮ್ಮ ಪ್ರಯಾಣಿಕ ಮೊದಲಿನಿಂದ ಕಡೆಯವರೆಗೆ ಕಂಡದ್ದು ಸೂರ್ಯನನ್ನು ಅಲ್ಲದೆ ಮತ್ತಾವುದನ್ನೂ ಅಲ್ಲ ಎಂಬುದು ಸತ್ಯವಲ್ಲವೆ? ಇದರಂತೆಯೇ ಭಿನ್ನ ಭಿನ್ನ ಪಂಥಗಳೂ ಕೂಡ ಸತ್ಯ. ಕೆಲವು ನಿಜವಾದ ಸೂರ್ಯನಿಗೆ ಸಮೀಪ ದಲ್ಲಿವೆ, ಮತ್ತೆ ಕೆಲವು ಬಹಳ ದೂರದಲ್ಲಿವೆ. ಆ ನಮ್ಮ ಸೂರ್ಯನೇ ''ಏಕಮೇವಾದ್ವಿತೀಯ.''

ನಿಜವಾದ ನಿರಪೇಕ್ಷ ಬ್ರಹ್ಮನನ್ನು ಬೋಧಿಸುವುದು ವೇದಗಳು ಮಾತ್ರ. ಇತರ ಭಗವಂತನ ಭಾವನೆಗಳೆಲ್ಲ ಅಂಶಮಾತ್ರ, ಮಿತಿಯಿಂದ ಕೂಡಿದವುಗಳು. ''ಸರ್ವಲೋಕಹಿತೈಷಿಣಿ'ಯಾದ ಶ್ರುತಿ ಎಲ್ಲರನ್ನೂ ಮಧುರವಾಗಿ ತನ್ನ ಕೈಗಳಿಂದ ಹಿಡಿದುಕೊಂಡು, ಪರಮಗುರಿಯನ್ನು ಸೇರುವವರೆಗೆ ಮೆಟ್ಟಿಲು ಮೆಟ್ಟಿಲಾಗಿ ಒಯ್ಯುವುದು. ಇತರ ಧರ್ಮಗಳೆಲ್ಲ ವಿಕಾಸವಾಗದ, ತಟಸ್ಥವಾದ ಒಂದು ಅವಸ್ಥೆಗಳು. ಇವುಗಳೆಲ್ಲ ಅನಂತವಾದ, ಸನಾತನವಾದ, ವೈದಿಕ ಧರ್ಮದಲ್ಲಿ ಸಂಗಮವಾಗಿವೆ.

ನೂರಾರು ಜನ್ಮಗಳನ್ನೆತ್ತಿ ಬರಬಹುದು, ಹಲವು ಕಾಲ ನಿಮ್ಮ ಮನಸ್ಸನ್ನು ಹುಡುಕಾಡಬಹುದು, ಆದರೂ ಅನಂತ ಆಧ್ಯಾತ್ಮಿಕತೆಯ ಗಣಿಯಂತೆ ಇರುವ ಹಿಂದೂಧರ್ಮದಲ್ಲಿ ಇಲ್ಲದ ಯಾವ ಒಂದು ಭವ್ಯ ಭಾವನೆಯೂ ಹೊರಗೆ ಇಲ್ಲ.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೫, ಪು. ೨೯೨-೯೩)*